O.S. ನಂಬರಃ 34/2020

ಪಿ. ಡಬ್ಲ್ಯೂಃ 1

ದಿಃ 30-08-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 2 ರಿಂದ 7, 13, 15 ರಿಂದ 17 ನೇ ಪ್ರತಿವಾದಿ ಪರ ಪಾಟಿ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.</u>

<u>ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಮ್.ಪಿ.ಬಿ. ವಕೀಲರಿಂದಃ</u>

ನಾನು ಕೆಇಬಿಯಲ್ಲಿ ಸೇವೆ ಸಲ್ಲಿಸಿ, ನಿವೃತ್ತನಾಗಿದ್ದೇನೆ. ನಾನು ಮನೆಯನ್ನು ಕಟ್ಟಿಕೊಂಡ ಸರ್ವೇ ನಂಬರ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿಯು ಸರ್ವೇ ನಂ.298/1 ಎ ರಲ್ಲಿ ಮನೆ ಕಟ್ಟಿಕೊಂಡಿದ್ದಾನೆ ಎಂದರೆ ಸರಿ. ಪಾಲು ವಾಟ್ನಿಯಲ್ಲಿ ನಾನು ಮನೆ ಕಟ್ಟಿಕೊಂಡ ಆಸ್ತಿಯ ಭಾಗವನ್ನು ನನ್ನ ಹೆಸರಿಗೆ ಹಾಗೂ 1 ನೇ ಪ್ರತಿವಾದಿ ಮನೆ ಕಟ್ಟಿಕೊಂಡ ಭಾಗವನ್ನು ಆತನ ಹೆಸರಿಗೆ ನೀಡಿದರೆ ತೊಂದರೆ ಇಲ್ಲ ಎಂದರೆ ಸರಿ. ದಾವಾ ಸರ್ವೇ ನಂ. 316/2 ಅ ವಿಸ್ತೀರ್ಣ 4-ಗುಂಟೆ ಮತ್ತು 316/2 ಕ ವಿಸ್ತೀರ್ಣ 4-ಗುಂಟೆ 8-ಆಣೆ ಇವು ಸೊಸೈಟಿ ಸಾಲದ ಸಲುವಾಗಿ ಮಾರಾಟವಾಗಿದೆ ಎಂದರೆ ಸರಿ.

ಪ್ರತಿವಾದಿ ನಂ. 12 ಮತ್ತು 22 ರವರೂ ಸಹ ತಮಗೆ ಸಂಬಂಧಿಸಿದ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಸಹೋದರರು ಹಾಗೂ ಇಬ್ಬರು ಸಹೋದರಿಯರು. ನನ್ನ ತಂದೆಗೆ ಏಳು ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಅವರೆಲ್ಲರನ್ನು

ಈ ದಾವೆಯಲ್ಲಿ ಸೇರಿಸಲಾಗಿದೆ. 1 ನೇ ಪ್ರತಿವಾದಿಯು ಮನೆ ಕಟ್ಟಿಕೊಂಡು ಉಳಿಯಲು ಆಸ್ತಿ ಭಾಗವನ್ನು ಆತನ ಹಿಸ್ಸೆಗೆ ಹಾಕಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಪಾಟಿ ಸವಾಲುಃ ಉಳಿದ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.